ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**
**PAPER CLIPPINGS**

07

ಇಲಾಖೆ / ವಿಷಯ : DEPARTMENT / SUBJECT: ವಿಧಾನಸಭೆ ಸಚಿವಾಲಯ

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ ದಿನಾಂಕ : DATE : 16/4/21

# ‘ಶಾಸನಸಭೆಯ ಸಂಪ್ರದಾಯ ಉಲ್ಲಂಘನೆ -ಸ್ಪೀಕರ್‌ಗೆ ಪತ್ರ’

ಪ್ರಜಾವಾಣಿ ವಾರ್ತೆ 16/4/21

ಬೆಂಗಳೂರು: ಸಭಾಧ್ಯಕ್ಷರೊಬ್ಬರು ತೆಗೆದುಕೊಂಡ ತೀರ್ಮಾನಗಳನ್ನು ಮತ್ತೊಬ್ಬ ಸಭಾಧ್ಯಕ್ಷರು ಪ್ರಶ್ನೆ ಮಾಡಿದ ಉದಾಹರಣೆ ಯಾವುದೇ ರಾಜ್ಯದ ವಿಧಾನಸಭೆಯಲ್ಲೂ ನಡೆದಿಲ್ಲ. ಹಿಂದೆ ಸಭಾಧ್ಯಕ್ಷರಾಗಿದ್ದ ಕೆ.ಆರ್.ರಮೇಶ್ ಕುಮಾರ್ ಅವರು ಕೆ.ಬಿ.ಕೋಳಿವಾಡ ಅವರ ತೀರ್ಮಾನ ಪ್ರಶ್ನಿಸಿ ಶಾಸನ ಸಭೆಯ ಸಂಪ್ರದಾಯ ಉಲ್ಲಂಘಿಸಿದ್ದಾರೆ ಎಂದು ವಿಧಾನಸಭೆಯ ಕಾರ್ಯದರ್ಶಿಯಾಗಿದ್ದು, ಅಮಾನತುಗೊಂಡಿರುವ ಎಸ್.ಮೂರ್ತಿ ಹೇಳಿದ್ದಾರೆ.

ಈ ಸಂಬಂಧ ಅವರು ವಿಧಾನ-ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಪತ್ರ ಬರೆದಿದ್ದಾರೆ. ಮೂರ್ತಿ ವಿಧಾನಸಭೆ ಕಾರ್ಯದರ್ಶಿಯಾಗಿದ್ದ ಅವಧಿಯಲ್ಲಿ ಅಕ್ರಮಗಳು ನಡೆದಿವೆ ಎಂದು ಆರೋಪಿಸಿ ಅವರನ್ನು ಅಮಾನ-ತ್ತಿನಲ್ಲಿಡಲಾಗಿದೆ.

ಕೋಳಿವಾಡ ಅವರ ಅವಧಿಯಲ್ಲಿ ಮಾಡಲಾದ ಖರ್ಚಿನ ಕುರಿತು ಕೆ.ಆರ್. ರಮೇಶ್ ಕುಮಾರ್ ಅವರು ತನಿಖೆಗೆ ಒಳಪಡಿಸುವ ಮೂಲಕ ಶಾಸಕಾಂಗದ ಆಡಳಿತದಲ್ಲಿ ಕಾರ್ಯಾಂಗವನ್ನು ಉಪಯೋಗಿಸಿಕೊಂಡು ಹಸ್ತಕ್ಷೇಪ ಮಾಡಿದ್ದಾರೆ. ಇದು ಸಂವಿಧಾನದ ಆಶಯಗಳಿಗೆ ವಿರುದ್ಧವಾದುದು ಎಂದು ಹೇಳಿದ್ದಾರೆ.

‘ನನ್ನನ್ನು ಕಾರ್ಯದರ್ಶಿ ಹುದ್ದೆಯಿಂದ ಅಮಾನತು ಮಾಡಿ 2 ವರ್ಷ 4 ತಿಂಗಳು ಕಳೆದಿದೆ. ರಾಜ್ಯ ಸೇವಾ ನಿಯಮಗಳಲ್ಲಿ ಮತ್ತು ಸರ್ಕಾರಿ ಆದೇಶಗಳಲ್ಲಿ ಯಾವುದೇ ಅಧಿಕಾರಿ/ನೌಕರನನ್ನು ಅಮಾನತು ಅವಧಿ 6 ತಿಂಗಳು ಎಂದು ನಿಗದಿ ಮಾಡಿದೆ. ಅದರ ಉಲ್ಲಂಘನೆಯೂ ಆಗಿದೆ. ರಮೇಶ್ ಕುಮಾರ್ ಅವಧಿಯಲ್ಲಿ ನನ್ನ ವಿರುದ್ಧ ನಡೆದಿರುವ ವಿಚಾರಣೆಯನ್ನು ಮರು ಪರಿಶೀಲನೆಗೆ ಒಳಪಡಿಸಬೇಕು’ ಎಂದು ಮೂರ್ತಿ ಒತ್ತಾಯಿಸಿದ್ದಾರೆ.

ಮೂರ್ತಿಯವರ ಆರೋಪಗಳ ಬಗ್ಗೆ ಪ್ರತಿಕ್ರಿಯೆಗೆ ರಮೇಶ್ ಕುಮಾರ್ ಸಿಗಲಿಲ್ಲ.